**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 17-06-2023.**

**ಪಾಟೀ ಸವಾಲು - ಪ್ರತಿವಾದಿ ನಂ.3 ಮತ್ತು 4 ರವರ ಪರ ವಕೀಲರಿಂದ :**

**1)** ನಮ್ಮ ತಾತನ ಹೆಸರು ಮುನಿಶಾಮಪ್ಪ. ನಮ್ಮ ಅಜ್ಜಿಯ ಹೆಸರು ಕರಿಯಮ್ಮ @ ಹನುಮಕ್ಕ. ನಮ್ಮ ತಾತನ ತಂದೆಯ ಹೆಸರು ನಾಗೇನಹಳ್ಳಿ ಈರಪ್ಪ. ನಮ್ಮ ಅಜ್ಜಿಯ ತಂದೆಯ ಹೆಸರು ತಮ್ಮಣ್ಣ. ಮುನಿಶಾಮಪ್ಪ ರವರಿಗೆ ಹೆಣ್ಣುಮಕ್ಕಳು ಇರಲಿಲ್ಲ. ಸದರಿ ತಮ್ಮಣ್ಣ ರವರಿಗೆ ಇಬ್ಬರು ಮಕ್ಕಳು. ಅವರ ಹೆಸರು ಹನುಮಯ್ಯ ಮತ್ತು ಹನುಮಕ್ಕ. ನಮ್ಮ ತಂದೆಗೆ ಸದರಿ ಹನುಮಯ್ಯ ಸೋದರ ಮಾವ ಆಗಿದ್ದರು. ಸದರಿ ಹನುಮಯ್ಯ ರವರ ಹೆಂಡತಿ ಹೆಸರು ನಂಜಮ್ಮ. ನಮ್ಮ ತಂದೆಯ ಸೋದರ ಮಾವ ಹನುಮಯ್ಯ ಮತ್ತು ನಮ್ಮ ತಂದೆಯ ಸೋದರ ಅತ್ತೆ ನಂಜಮ್ಮ ರವರಿಗೆ ಸಂತತಿ ಇಲ್ಲ. ನಮ್ಮ ತಾತ ಮುನಿಶಾಮಪ್ಪ ರವರ ತಂಗಿಯನ್ನೇ ನಮ್ಮ ತಂದೆಯ ಸೋದರ ಮಾವ ಹನುಮಯ್ಯ ರವರಿಗೆ ವಿವಾಹ ಮಾಡಿಕೊಟ್ಟಿದ್ದರು. ಅವರೇ ನಂಜಮ್ಮ. ಸದರಿ ಹನುಮಯ್ಯ ಮತ್ತು ಹನುಮಕ್ಕ ರವರ ತಂದೆ ತಮ್ಮಣ್ಣ ರವರಿಗೆ ಅವರದೇ ಆದ ಪ್ರತ್ಯೇಕ ಆಸ್ತಿಗಳು ಇದ್ದವು ಎಂದರೆ ಸರಿ. ಅವರ ಆಸ್ತಿಗಳು ಬೆಟ್ಟಹಲಸೂರಿನಲ್ಲಿ ಇದ್ದವು ಎಂದರೆ ಸರಿ. ಸದರಿ ತಮ್ಮಣ್ಣ ರವರ ಆಸ್ತಿ ಪ್ರತಿವಾದಿ ನಂ.2 ರವರ ಲಿಖಿತ ಹೇಳಿಕೆಯಲ್ಲಿ ತಿಳಿಸಲಾದ ಐಟಂ ನಂ.1, 2 ಮತ್ತು 4 ಆಗಿರುತ್ತವೆ ಎಂದರೆ ಸರಿ. ಐಟಂ ನಂ.3 - ನಮ್ಮ ತಂದೆ ಸೋದರ ಅತ್ತೆ ನಂಜಮ್ಮ ರವರಿಂದ ಖರೀದಿಸಿದ ಸ್ವತ್ತು. ಐಟಂ ನಂ.5 - ನಮ್ಮ ತಂದೆಯ ಸ್ವತ್ತು. ಐಟಂ ನಂ.5 ನ್ನು ನಮ್ಮ ತಂದೆ ವೆಂಕಟರಾಯಪ್ಪ ರವರಿಂದ ಖರೀದಿಸಿರುತ್ತಾರೆ. ಐಟಂ ನಂ.6 - ನಮ್ಮ ತಂದೆ ನಾರಾಯಣಶೆಟ್ಟಿ ರವರಿಂದ ಖರೀದಿಸಿರುತ್ತಾರೆ.

**2)** ದಾವಾ ಷೆಡ್ಯೂಲ್ ಸ್ವತ್ತುಗಳು ಮುನಿಶಾಮಪ್ಪ ರವರ ಒಟ್ಟು ಕುಟುಂಬದ ಆಸ್ತಿಗಳು. ಸದರಿ ಸ್ವತ್ತುಗಳು ಮುನಿಶಾಮಪ್ಪ ರವರಿಗೆ ಅವರ ತಂದೆ ನಾಗೇನಹಳ್ಳಿ ಈರಪ್ಪ ಮತ್ತು ಮಕ್ಕಳ ಮಧ್ಯೆದಲ್ಲಿ ಆದ ವಿಭಾಗದಲ್ಲಿ ಬಂದಿರುವ ಸ್ವತ್ತುಗಳು. ದಾವಾ ಸ್ವತ್ತುಗಳ ಹೊರತಾಗಿ ಮುನಿಶಾಮಪ್ಪನ ಕುಟುಂಬಕ್ಕೆ ಬೇರೆ ಆಧಾರ ಇರಲಿಲ್ಲ. ಮುನಿಶಾಮಪ್ಪ ರವರು ತೀರಿಹೋದ ನಂತರ ಇಂದಿನವರೆಗೂ ಸದರಿ ಸ್ವತ್ತುಗಳ ವಿಭಾಗ ಆಗಿರಲಿಲ್ಲ. ವೆಂಕಟಪ್ಪ ಮತ್ತು ಪಟಾಲಪ್ಪ ರವರು ಅವರ ಜೀವತಾವಧಿಯಲ್ಲಿ ಪ್ರತ್ಯೇಕವಾಗಿ ಉಳುಮೆ ಮಾಡುತ್ತಿರಲಿಲ್ಲ. ಪಟಾಲಪ್ಪ ರವರು ವೆಂಕಟಪ್ಪ ರವರ ಪೂರ್ವದಲ್ಲಿ ತೀರಿಹೋಗಿರುತ್ತಾರೆ. ನಮ್ಮ ತಂದೆ ಪಟಾಲಪ್ಪ ರವರ ಕುಟುಂಬವನ್ನು ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವೆಂಕಟಪ್ಪ ಮತ್ತು ಪಟಾಲಪ್ಪ ರವರಿಗೆ ಪ್ರತ್ಯೇಕವಾದ ಆದಾಯ ಇರಲಿಲ್ಲ ಎಂದರೆ ದಾವಾ ಸ್ವತ್ತುಗಳೇ ಅವರಿಗೆ ಆಧಾರ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಿಂದಲೇ ವೆಂಕಟಪ್ಪ ಮತ್ತು ಪಟಾಲಪ್ಪ ರವರ ಮನೆಗಳ ನಿರ್ವಹಣೆ ಆಗುತ್ತಿತ್ತು. ಮುನಿಶಾಮಪ್ಪ ರವರು ತೀರಿಹೋದ ನಂತರ ವೆಂಕಟಪ್ಪ ರವರು ಕುಟುಂಬದ ಯಜಮಾನತ್ವವನ್ನು ವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

**3)** ನಮಗೆ ಮತ್ತು ಪಟಾಲಪ್ಪ ರವರ 1ನೇ ಹೆಂಡತಿ ಕೃಷ್ಣಮ್ಮ ರವರ ಮಗ ಮುನಿಕೆಂಪಯ್ಯ ರವರಿಗೆ ಸಂಬಂಧ ಚೆನ್ನಾಗಿದೇಯಾ? ಎಂದರೆ ಚೆನ್ನಾಗಿದೆ ಎಂದು ಹೇಳುತ್ತಾರೆ. ನಾನು ಮತ್ತು 1ನೇ ಪ್ರತಿವಾದಿ ಸೇರಿ 3 ಮತ್ತು 4ನೇ ಪ್ರತಿವಾದಿಗಳಿಗೆ ಭಾಗ ಕೊಡಬಾರದು ಎಂದು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವೆಂಕಟಪ್ಪ ರವರು ಹನುಮಯ್ಯ ರವರ ಆಸ್ತಿಗೆ ಎಷ್ಟು ಹಕ್ಕುದಾರರೋ? ಅಷ್ಟೇ ಪಟಾಲಪ್ಪ ರವರು ಹಕ್ಕುದಾರರು ಎಂದರೆ ಸರಿಯಲ್ಲ. ಹನುಮಯ್ಯ ರವರು ವಿಲ್ ನಾಮೆ ಮಾಡಿರುತ್ತಾರೆ. ಸದರಿ ವಿಲ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿಯ ಯಾವುದೇ ವಿಲ್ ಇರುವುದಿಲ್ಲ ಆದ್ದರಿಂದ ನಾನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಟಾಲಪ್ಪ ರವರ ಮಕ್ಕಳಿಗೆ ಭಾಗ ಕೊಡುವುದನ್ನು ತಪ್ಪಿಸಲು ವಿಲ್ ಅನ್ನು ಈಗ ಸೃಷ್ಟಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 1953 ರಿಂದ ನನ್ನ ಪ್ರಕಾರ ಇದೆ ಎಂದು ಹೇಳುವ ವಿಲ್ ನಾಮೆಯನ್ನು ಎಂದಿಗೂ ಹೊರಗೆ ತಂದಿರುವುದಿಲ್ಲ ಎಂದರೆ ಸರಿಯಲ್ಲ.

**4)** ಪ್ರತಿವಾದ ಪತ್ರ ಐಟಂ ನಂ.3, 5 ಮತ್ತು 6 ನ್ನು ನಮ್ಮ ತಂದೆ ಖರೀದಿ ಮಾಡಿದ್ದರು ಎಂಬ ವಿಷಯವನ್ನು ಎಲ್ಲಿಯೂ ಸಹ ನಾನು ಸೂಚಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ತಮ್ಮಣ್ಣಪ್ಪ ರವರ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ನಮ್ಮ ತಂದೆಗೆ ಖರೀದಿ ಮಾಡಲು ಕುಟುಂಬದ ಆದಾಯದ ಹೊರತಾಗಿ ಯಾವುದೇ ಪ್ರತ್ಯೇಕ ಆದಾಯ ಇರಲಿಲ್ಲ ಎಂದರೆ ಹನುಮಯ್ಯ ರವರು ಮಾಡಿದ ವಿಲ್ ಆಧಾರದ ಮೇಲೆ ಪಡೆದ ಆಸ್ತಿಗಳ ಆದಾಯ ಇತ್ತು ಎಂದು ಹೇಳುತ್ತಾರೆ. ಹನುಮಯ್ಯ ತೀರಿಹೋದ ನಂತರ ಮುನಿಶಾಮಪ್ಪ ರವರ ಮನೆಯವರೇ ಅವರ ಎಲ್ಲಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ವೆಂಕಟಪ್ಪ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಹನುಮಯ್ಯ ರವರು ಮೊದಲು ತೀರಿಹೋಗಿದ್ದು ನಂತರ ನಂಜಮ್ಮ ತೀರಿಹೋದರು. ದಾವಾ ಸ್ವತ್ತುಗಳು ಮತ್ತು ಪ್ರತಿವಾದ ಪತ್ರದ ಸ್ವತ್ತುಗಳು ಎಲ್ಲಾ ಒಟ್ಟು ಕುಟುಂಬದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ.

**5)** ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ನಂ.1, 3 ಮತ್ತು 4 ರವರ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**